ದಿನಾಂಕ 13-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯರ ಪರ ಮಾನ್ಯ ಎ.ಜಿ.ಪಿ ರವರಿಂದ**

ಪ್ರಸ್ತುತ ದಾವೆಯನ್ನು ಸಲ್ಲಿಸಲು ನಾನೇ ನಮ್ಮ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳನ್ನಾಗಿ ಯಾರ್ಯಾರನ್ನು ಮಾಡಿರುತ್ತೆವೆಂದು ನನಗೆ ಮಾಹಿತಿ ಇದೆ. ನನ್ನ ದಾವೆಯಲ್ಲಿ ನಮ್ಮ ಕುಟುಂಬದ ವಂಶಾವಳಿಯನ್ನು ತೋರಿಸಿರುವುದಿಲ್ಲವೆಂದರೆ ಸರಿ. ಆ ರೀತಿ ನಮ್ಮ ವಂಶಾವಳಿಯನ್ನು ತೋರಿಸಲು ಯಾವುದೇ ತೊಂದರೆ ಇರಲಿಲ್ಲ.

ನಾನು ದಾವಾ ಪತ್ರದಲ್ಲಿ ಎರಡನೇ ಪ್ರತಿವಾದಿ ನನ್ನ ಮೃತ ಮಗನ ಹೆಂಡತಿಯಾಗಬೇಕು, ಮೂರು ಮತ್ತು ನಾಲ್ಕನೇ ಪ್ರತಿವಾದಿಗಳು ನನ್ನ ಮೃತ ಮಗನ ಮಕ್ಕಳಾಗಬೇಕು ಎಂದು ನಮೂದಿಸಿದ್ದೇನೆಂದರೆ ಸರಿ. ಸದರಿ ಅಂಶವನ್ನು ತಿದ್ದುಪಡಿ ಮಾಡಿಕೊಳ್ಳಲು ಇಲ್ಲಿಯವರೆಗೂ ಅರ್ಜಿ ಸಲ್ಲಿಸಿರುವುದಿಲ್ಲವೆಂದರೆ ಸರಿ. ನಮ್ಮ ಕುಟುಂಬದ ವಂಶಾವಳಿಯನ್ನು ನಾನು ತೋರಿಸಿರದ ಕಾರಣ ಪ್ರಸ್ತುತ ದಾವೆ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ಪ್ರಸ್ತುತ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲವೆಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಲು ಸ್ಪಷ್ಟವಾದ ವ್ಯಾಜ್ಯ ಕಾರಣವನ್ನು ದಾವೆಯಲ್ಲಿ ನಮೂದಿಸಿರುವುದಿಲ್ಲವೆಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಗಳ ಮೇಲೆ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾರಸುದಾರರು ಕೋರಿ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಆದೇಶ ನೀಡಲು ನ್ಯಾಯಾಲಯಕ್ಕೆ ಕಾರ್ಯ ವ್ಯಾಪ್ತಿ ಇರುವುದಿಲ್ಲವೆಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಗಳ ಮುಂದೆ ಯಾವುದೇ ಅರ್ಜಿ ಸಲ್ಲಿಸದೇ ನೇರವಾಗಿ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಯು ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಪರಿಹಾರವನ್ನು ನೀಡಲು ನ್ಯಾಯಾಲಯಕ್ಕೆ ಕಾರ್ಯವ್ಯಾಪ್ತಿ ಇರುವುದಿಲ್ಲವೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ